# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 138 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪ್ರತಾಪ ಸಿಂಹ ನಾಯಕ್ ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15.07.2024 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮತ್ತೆ ಮತ್ತೆ ಭ್ರೂಣಹತ್ಯೆ ದಂಧೆ ಮುರುಕಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, ಕಳೆದ ವರ್ಷ ರಾಜ್ಯದಲ್ಲಿ ವರದಿಯಾಗಿರುವ ಭ್ರೂಣಹತ್ಯೆ ದಂಧೆ ಪ್ರಕರಣಗಳ ಸಂಖ್ಯೆ ಎಷ್ಟು; | 2023-24 ನೇ ಸಾಲಿಗೆ ಭ್ರೂಣಹತ್ಯೆ ಸಂಬಂಧಿಸಿದಂತೆ 03 ಪ್ರಕರಣಗಳು ವರದಿಯಾಗಿರುತ್ತದೆ. |
| ಇ) | ಸದರಿ ಪ್ರಕರಣಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಸರ್ಕಾರ ಇದುವರೆಗೆ ಯಾವ ಕ್ರಮಗಳನ್ನು ಕೈಗೊಂಡಿದೆ; | ಸದರಿ ಪ್ರಕರಣಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಪಿ.ಸಿ&ಪಿ.ಎನ್.ಡಿ.ಟಿ. ಮತ್ತು ಎಂ.ಟಿ.ಪಿ. ಕಾಯ್ದೆಯಡಿ ಪ್ರಕರಣಗಳನ್ನು ಹೂಡಲಾಗಿದೆ. |
| ಈ) | ಭ್ರೂಣಹತ್ಯೆ ದಂಧೆ ಮತ್ತೆ ಮತ್ತೆ ಮುರುಕಳಿಸುತ್ತಿರುವುದನ್ನು ತಡೆಯಲು ವ್ಯವಸ್ಥಿತ ಕಾರ್ಯತಂತ್ರ ರೂಪಿಸಲು ಸರ್ಕಾರ ಇದುವರೆಗೆ ಏನು ಕ್ರಮ ವಹಿಸಿದೆ; | ಭ್ರೂಣ ಹತ್ಯೆ ದಂಧೆ ಮತ್ತೆ ಮತ್ತೆ ಮರುಕಳಿಸುತ್ತಿರುವುದುನ್ನು ತಡೆಯಲು ಸರ್ಕಾರವು ಕೆಳಕಾಣಿಸಿದಂತೆ ಕ್ರಮಗಳನ್ನು ಕೈಗೊಳ್ಳುತ್ತಿದೆ.<br>• ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯಡಿ ಬರುವ ಎಲ್ಲಾ ಶಾಸನಬದ್ಧ ಸಮಿತಿಗಳು ರಾಜ್ಯ ಮತ್ತು ಜಿಲ್ಲೆಗಳಲ್ಲಿ ರಚನೆಗೊಂಡಿರುತ್ತದೆ.<br>• ರಾಜ್ಯದಿಂದ "ಬಾಲಿಕಾ" ಆನ್‌ಲೈನ್ ಸಾಫ್ಟವೇರ್ ಮುಖಾಂತರಎಲ್ಲಾಸ್ಕ್ಯಾನಿಂಗ್ ಸೆಂಟರ್ ಗಳನ್ನುಕಡ್ಡಾಯವಾಗಿ ನೋಂದಣಿ ಮತ್ತು ನವೀಕರಣ ನಡೆಸಲಾಗುತ್ತಿದೆ.<br>• ಅಲ್ಟ್ರಾಸೌಂಡ್ ತಯಾರಕರು, ಮಾರಾಟಗಾರರು, ರಿಪೇರಿಮಾಡುವವರನ್ನು ರಾಜ್ಯಮಟ್ಟದಲ್ಲಿ ನೋಂದಾಯಿಸಿ, ತ್ರೈಮಾಸಿಕ ವರದಿಯನ್ನು ಪಡೆಯಲಾಗುತ್ತಿದೆ.<br>• ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯ ಬಗ್ಗೆ, ರಾಜ್ಯಮಟ್ಟದಿಂದ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಕಾಲಾನುಕಾಲಕ್ಕೆ ಅರಿವು ಮೂಡಿಸುವ ಕಾರ್ಯಗಾರವನ್ನು ನಡೆಸಲಾಗುತ್ತಿದೆ.<br>• 2023-24 ನೇ ಸಾಲಿನಲ್ಲಿ ಬಸ್ ಬ್ರ್ಯಾಡಿಂಗ್, ಟ್ರೈನ್ ಬ್ರ್ಯಾಡಿಂಗ್, ಹೋರ್ಡಿಂಗ್ಸ್, ಗೋಡೆಬರಹ, ರೇಡಿಯೋಜಿಂಗಲ್ಸ್, ಟಿ.ವಿ. ಸ್ಪಾಟ್ಸ್ ಮುಖಾಂತರ |

| | | |
|---|---|---|
| | | ಸಾರ್ವಜನಿಕರಿಗೆ ಹೆಣ್ಣು ಭ್ರೂಣಪತ್ತೆ ಮತ್ತು ಹತ್ಯೆಯ ಕುರಿತು ಅರಿವು ಮೂಡಿಸಲಾಗುತ್ತಿದೆ.<br>• ದಿನಾಂಕ: 29.11.2023 ರಂದು ಮಾನ್ಯ ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಜೂಮ್ ಮೀಟಿಂಗ್ ನಲ್ಲಿ ಎಲ್ಲಾ ಜಿಲ್ಲೆಯ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ದಿನಾಂಕ: 31.12.2023 ರೊಳಗೆ ಎಲ್ಲಾ ಸ್ಕ್ಯಾನಿಂಗ್ಸೆಂಟರ್ /ಆಸ್ಪತ್ರೆ /ಕ್ಲಿನಿಕ್‌ಗಳನ್ನು ತಪಾಸಣೆ ನಡೆಸಿ, ಪಿ.ಸಿಮತ್ತುಪಿ.ಎನ್.ಡಿ.ಟಿ. ಹಾಗೂಕೆ.ಪಿ.ಎಂ.ಇ. ಪರವಾನಿಗೆಯಿಲ್ಲದ ಸೆಂಟರ್/ ಆಸ್ಪತ್ರೆ / ಕ್ಲಿನಿಕ್‌ಗಳನ್ನು ಕೂಡಲೇ ಮುಚ್ಚಲು ಆದೇಶಿಸಿರುತ್ತಾರೆ. |
| | | • ರಾಜ್ಯದಲ್ಲಿಅನಧಿಕೃತಸ್ಕ್ಯಾನಿಂಗ್ ಸೆಂಟರ್‌ಗಳನ್ನು KPME/PC PNDT ಕಾಯ್ದೆಯಡಿ ಬಂದ್ ಮಾಡಿಸಲು, ತಪಾಸಣಾಭೇಟಿಗಳನ್ನುತೀವ್ರಗೊಳಿಸಲುಆಯುಕ್ತರು, ಕೆಪಿಎಂಇ ಕಾಯ್ದೆಯಡಿ ಸುತ್ತೋಲೆಯನ್ನು ಹೊರಡಿಸಲಾಗಿದೆ.<br>• ಸರ್ಕಾರಿ ಆದೇಶಸಂಖ್ಯೆ: ಆಕುಕ 01 ಎಫ್.ಪಿ.ಇ. 2024, ಬೆಂಗಳೂರು, ದಿನಾಂಕ: 03.01.2024 ರಂದು ಪಿ.ಸಿ&ಪಿ.ಎನ್.ಡಿ.ಟಿ. ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯ ಕಾರ್ಯಪಡೆಯನ್ನು ರಚಿಸಲಾಗಿದೆ. |
| ಉ) | ರಾಜ್ಯದಲ್ಲಿ ಮತ್ತೆ ಮತ್ತೆ ಮರುಕಳಿಸುತ್ತಿರುವ ಭ್ರೂಣ ಹತ್ಯೆ ದಂಧೆಗೆ ಸಂಪೂರ್ಣ ಕಡಿವಾಣ ಹಾಕಲು ಕಠಿಣ ಮತ್ತು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಈ ಕೂಡಲೇ ಮುಂದಾಗುವುದೇ? | ರಾಜ್ಯದಲ್ಲಿ ಮತ್ತೆ ಮತ್ತೆ ಮರುಕಳಿಸುತ್ತಿರುವ ಭ್ರೂಣ ಹತ್ಯೆ ದಂಧೆಗೆ ಸಂಪೂರ್ಣ ಕಡಿವಾಣ ಹಾಕಲು ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಆಕುಕ 29 ಎಸ್.ಟಿ.ಕ್ಯೂ 2024

**(ದಿನೇಶ್ ಗುಂಡೂರಾವ್)**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು